ಮಾತಾಡ್ತ ಇಲ್ಲ' ಅಂತ ಕೇಳಿದಳು. 'ಅದನ್ನೆಲ್ಲ ಒಂದೆರಡು ಮಾತುಗಳಲ್ಲಿ ಹೇಳೋಕಾಗಲ್ಲ' ಅಂದ. ಸರಿ ಮಾತಾಡು ಎನ್ನುವಂತೆ ಮುಖ ನೋಡಿದಳು

'ಅಮ್ಮ ಜೀವನದಲ್ಲಿ ತುಂಬಾ ಸಫರ್ ಮಾಡಿದ್ದಾರೆ ಮೇಡಂ. ಅಪ್ಪ, ಅಮ್ಮ ಇಬ್ಬರೂ ಆರ್‌ಬಿಐನಲ್ಲಿ ದೊಡ್ಡ ಪೊಸಿಷನ್‌ನಲ್ಲಿದ್ರು. ಇಬ್ಬರದೂ ಲವ್ ಮ್ಯಾರೇಜು. ಅಪ್ಪ ಅವರ ನಲವತ್ತೆಂಟನೆ ವಯಸ್ಸಿನಲ್ಲಿ ಅಮ್ಮನ ಕಲೀಗ್ ಒಬ್ಬಳ ಜತೆ ಲಿವಿಂಗ್ ರಿಲೇಷನ್‌ಶಿಪ್ ಬೆಳೆಸಿಕೊಂಡು ನಮ್ಮಿಂದ ದೂರವಾದರು. ಅಮ್ಮನಿಗೆ ಡಿಪ್ರೆಷನ್ ಶುರುವಾಯಿತು. ಆಮೇಲೆ ಅಪ್ಪ ಸುಮ್ಮನಿದ್ದು ಬಿಡೊ ಬದಲು ಡೈವೋರ್ಸ್ ಬೇಕು ಅಂತ ಲಾಯರ್ ನೋಟೀಸ್ ಕಳಿಸಿದರು. ಅಮ್ಮ ಎರಡು ಸಲ ಸೂಯಿಸೈಡ್ ಅಟೆಂಪ್ಟ್ ಮಾಡಿದ್ದರು. ಕೊನೆಗೂ ಡೈವೋರ್ಸ್ ಕೊಡಲು ಒಪ್ಪಲಿಲ್ಲ. ಆಮೇಲೆ ಅಪ್ಪ ಹೈದರಾಬಾದ್‌ಗೆ ಟ್ರಾನ್ಸ್‌ಫರ್ ತಗಂಡು ಹೋದರು. ಅಪ್ಪನನ್ನು ಇಷ್ಟಪಟ್ಟ ಹೆಂಗಸು ಅವರ ಜತೆ ಮೂರು ವರ್ಷಗಳೂ ಇರಲಿಲ್ಲ. ಬೇರೆ ಯಾರನ್ನೋ ಮದುವೆಯಾಗಿ ಕೆನಡಾಕ್ಕೆ ಹೋದರಂತೆ. ಅಪ್ಪ ಒಂಟಿಯಾದರು. ರಿಟೈರ್ ಆಗೋಕೆ ಮೂರು ವರ್ಷ ಮೊದಲು ಮತ್ತೆ ಇಲ್ಲಿಗೇ ಬಂದರು. ಆಗ ಅಪ್ಪನ ಮುಖ ನೋಡಬೇಕಾಗುತ್ತೆ ಅಂತ ಅಮ್ಮ ವಾಲಂಟರಿ ರಿಟೈರ್‌ಮೆಂಟ್ ತಗಂಡು ಮನೆಯಲ್ಲೇ ಉಳಿದರು. ಎಂಟ್ಹತ್ತು ವರ್ಷ ನಾನು ಅಪ್ಪನನ್ನು ನೋಡೇ ಇರಲಿಲ್ಲ...' ಅಂತ ಹೇಳಿ ಮೂರ್ನಾಲ್ಕು ನಿಮಿಷ ಸುಮ್ಮನಿದ್ದ.

'ಒಂದು ಸಲ ನೋಡೋಕೆ ಅಂತಲೇ ಅವರ ಮನೆಗೆ ಹೋಗಿದ್ದೆ. ನೋಡಿದ ಮೇಲೆ ಪಾಪ ಅನ್ನಿಸಿತು. ಅವರು ನನ್ನ ಗುರುತಿಸಲೇ ಇಲ್ಲ. ನಾನು ನಿಮ್ಮ ಮಗ ಜಯದೇವ ಅಂತ ಹೇಳಿಕೊಳ್ಳಬೇಕಾಯಿತು. ಅಪ್ಪನಿಗೆ ಮರೆವು ಶುರುವಾಗಿತ್ತು. ಅವರಲ್ಲಿ ಉತ್ಸಾಹವೇ ಉಳಿದಿರಲಿಲ್ಲ. ಅವರನ್ನು ಮನೆಗೆ ಕರಕೊಂಡು ಬರಲಾ ಅಂತ ಅಮ್ಮನನ್ನು ಕೇಳಿದೆ. ಅವರು ಒಪ್ಪಲಿಲ್ಲ. ಅಪ್ಪನಿಗೆ ಮನೆಗೆ ಬರೋಕೆ ಇಷ್ಟವಿತ್ತು.

ಬರುಬರುತ್ತ ಅಮ್ಮ ತುಂಬಾನೆ ಸ್ಯಾಡಿಸ್ಟ್ ಆಗಿಬಿಟ್ಟರು. ಆಮೇಲೆ ನನ್ನ ಬಗ್ಗೆ ಪೊಸೆಸಿವ್‌ನೆಸ್ ಬೆಳೆಸಿಕೊಂಡರು. ಈಗಲೂ ಅಷ್ಟೇ, ನಾನು ಮನೆಗೆ ಹೋಗೋದು ಸ್ವಲ್ಪ ತಡವಾದರೂ ನಂಗೇನೋ ಆಗಿದೆ ಅಂತ ಯೋಚಿಸ್ತ ಚಡಪಡಿಸ್ತಾರೆ. ನಾನು ಸತ್ತರೆ ನೀನು ಒಂಟಿಯಾಗಿ ಬಿಡ್ತೀಯ ಅನ್ನೋಕೆ ಶುರು ಮಾಡಿದ್ದಾರೆ. ಅಮ್ಮನಿಗೆ ಅದೇನನ್ನಿಸಿತೊ ಮೂರು ತಿಂಗಳ ಹಿಂದೆ ನಿಮ್ಮಪ್ಪನ್ನ ಕರಕಂಡ್ ಬಾ, ಆದರೆ ಅವರು ಮೇಲ್ಗಡೆ ಮನೆಯಲ್ಲಿ ಇರಲಿ. ನಾನು ಅವರ ಜತೆ ಮಾತಾಡಲ್ಲ ಅಂತ ಹೇಳೋಕೆ ಶುರು ಮಾಡಿದರು.'

ಅಪ್ಪ ಅಮ್ಮನ ಮುರಿದ ಸಂಬಂಧಗಳನ್ನು ಜಯದೇವ ಅತ್ಯಂತ ನಿರ್ಭಾವುಕನಾಗಿ ಯಾರದೋ ಜೀವನದ ದುರಂತ ಕಥೆ ಎಂಬಂತೆ ಹೇಳುತ್ತಿದ್ದಾನಲ್ಲ ಅನ್ನಿಸಿ ತನ್ಮಯಿ ಅವನ ಮುಖ ನೋಡಿದಳು.

'ಅಪ್ಪನ ಜೀವನದ ಟ್ರಾಜೆಡಿ ಏನು ಗೊತ್ತಾ ಮೇಡಂ? ಅವರನ್ನ ಮನೆಗೆ ಬನ್ನಿ ಅಂತ ಕರೆಯೋಕೆ ಹೋಗಿದ್ದೆ. ಅವರು ಮನೇಲಿ ಇರಲಿಲ್ಲ! ಅಕ್ಕಪಕ್ಕದ ಮನೆಗಳವರಿಗೆ ಅವರ ಬಗ್ಗೆ ಏನೂ ಗೊತ್ತೇ ಇರಲಿಲ್ಲ. ಕೊನೆಗೆ ಅವರ ಫ್ರೆಂಡ್ಸ್‌ಗಳನ್ನು ಹುಡುಕಿ ವಿಚಾರಿಸಿದ ಮೇಲೆ ಅವರು ಕನಕಪುರ ರೋಡಲ್ಲಿ ಸ್ವಾಮೀಜಿಯೊಬ್ಬರು ನಡಸ್ತಿರೊ ಓಲ್ಡೇಜ್ ಹೋಂನಲ್ಲಿದ್ದಾರೆ ಅಂತ ಗೊತ್ತಾಯ್ತು. ಅಲ್ಲಿಗೆ ಹೋಗಿ ನೋಡಿದರೆ ಅವರಿಗೆ ಅಲ್ಜಮೈರ್! ಹಳೆಯದೇನೂ ನೆನಪಿರಲಿಲ್ಲ. ಅವರನ್ನು ನೋಡಿದ ಮೇಲೆ ಜೀವನದ ಬಗ್ಗೆಯೇ ಜಿಗುಪ್ಸೆಯಾಯಿತು.

ಅಪ್ಪನಿಗೆ ನನ್ನ ನೆನಪೂ ಇರಲಿಲ್ಲ. ಮೊಬೈಲಲ್ಲಿರೊ ಅಮ್ಮನ ಫೋಟೊ ತೋರಿಸಿದೆ. ಅವರನ್ನೂ ಗುರುತಿಸಲಿಲ್ಲ. ಅಪ್ಪನ ತಂಗಿಯರಿಬ್ಬರು ಯುಎಸ್‌ನಲ್ಲಿದ್ದಾರೆ. ಅವರಿಗೆ ವಿಷಯ ತಿಳಿಸಿದೆ. ಅವರು ಅಪ್ಪನ ಬಗ್ಗೆ ಅನುಕಂಪದ ಮಾತಾಡಿದರೇ ಹೊರತು ಬೇರೇನೂ ಹೇಳಲಿಲ್ಲ. ನೀನೇ ಅಣ್ಣನನ್ನು